


بسم اللهِ الرّحمٰن الرّحيم

# ಜಲ್ಸ ಸಾಲಾನ ಯು.ಕೆ. 2026 – ಅಲ್ಲಾಹನ ಅನುಗ್ರಹಗಳು ಮತ್ತು ಅತಿಥಿಗಳ ಅಭಿಪ್ರಾಯಗಳ ಪ್ರಸ್ತಾಪ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **31–07–2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಅಲ್ಲಾಹನ ಕೃಪೆಯಿಂದ ಕಳೆದ ಭಾನುವಾರದಂದು ಅಹ್ಮದಿಯಾ ಮುಸ್ಲಿಮ್ ಜಮಾಅತ್ ಬ್ರಿಟನಿನ ಮೂರು ದಿನಗಳ ಜಲ್ಸ ಸಾಲಾನ ಅಲ್ಲಾಹನ ಅನುಗ್ರಹಗಳನ್ನು ಗಳಿಸುತ್ತಾ ಮುಕ್ತಾಯಗೊಂಡಿತು. ಜಲ್ಸದ ಸಿದ್ಧತೆಗಾಗಿ ತಿಂಗಳುಗಳೇ ಬೇಕಾಗುತ್ತವೆ. ಒಂದು ಜಲ್ಸ ಮುಗಿದ ತಕ್ಷಣವೇ ಮುಂದಿನ ಜಲ್ಸದ ಸಿದ್ಧತೆ ಪ್ರಾರಂಭವಾಗುತ್ತದೆ. ಜಲ್ಸಗೆ ಕೆಲವು ವಾರಗಳಿರುವಾಗ ಅದರ ಸಿದ್ಧತೆಗಳು ವೇಗವಾಗಲು ಪ್ರಾರಂಭವಾಗುತ್ತದೆ. ಒಂದೆರಡು ವಾರಗಳು ಇರುವಾಗಲಂತೂ ಇದು ತೀವ್ರಗೊಳ್ಳುತ್ತದೆ. ಜಲ್ಸದ ದಿನಗಳಲ್ಲಿ ಸಾವಿರಾರು ಸ್ವಯಂಸೇವಕರು, ಪುರುಷರು–ಮಹಿಳೆಯರು, ವಯಸ್ಕರು–ಯುವಕರು, ತಮ್ಮೆಲ್ಲ ಸಾಮರ್ಥ್ಯಗಳೊಂದಿಗೆ ಮತ್ತು ನಿಷ್ಠೆಯಿಂದ ಸದಾ ಸೇವೆಯಲ್ಲಿ ನಿರತರಾಗಿರುತ್ತಾರೆ.

ಹಾಗಾಗಿ ಈ ದೃಷ್ಟಿಯಿಂದ, ಜಲ್ಸದ ಯಾವುದೇ ವಿಭಾಗದಲ್ಲಿ ಸೇವೆ ಸಲ್ಲಿಸಿದ ಎಲ್ಲ ಕಾರ್ಯಕರ್ತರೂ ಕೃತಜ್ಞತೆಗೆ ಅರ್ಹರಾಗಿದ್ದಾರೆ. ಅಲ್ಲಾಹನು ಅವರಿಗೆ ಈ ಸೇವೆಗಾಗಿ ಅತ್ಯುತ್ತಮ ಪ್ರತಿಫಲ ನೀಡಲಿ. ಅದೇ ರೀತಿ ಎಂ.ಟಿ.ಎ. ಕಾರ್ಯಕರ್ತರಿದ್ದಾರೆ, ಅವರಲ್ಲಿ ಹೆಚ್ಚಿನವರು ಸ್ವಯಂಸೇವಕರಾಗಿದ್ದಾರೆ. ಪತ್ರಿಕಾ ಮತ್ತು ಮಾಧ್ಯಮದ ತಂಡವಿದೆ. ಖುದ್ದಾಮುಲ್ ಅಹ್ಮದಿಯಾ ಕೆನಡಾದ ಖಾದಿಮರು ಪ್ರತಿ ವರ್ಷದಂತೆ ದೊಡ್ಡ ಸಂಖ್ಯೆಯಲ್ಲಿ ಇಲ್ಲಿಗೆ ಬಂದರು ಮತ್ತು ವೈಂಡ್ ಅಪ್ ಕಾರ್ಯದಲ್ಲಿ ಸೇವೆ ಸಲ್ಲಿಸಿದರು. ಈಗ ಆಸ್ಟ್ರೇಲಿಯಾದವರೂ ಬರಲು ಪ್ರಾರಂಭಿಸಿದ್ದಾರೆ; ಇವರೆಲ್ಲರೂ ಅತ್ಯಂತ ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ.

ನಾನು ಎಲ್ಲ ಕಾರ್ಯಕರ್ತರು ಮತ್ತು ಕಾರ್ಯಕರ್ತೆಯರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ, ಆದರೆ ಇದರೊಂದಿಗೆ ಹಝ್ರತ್ ಮಸೀಹ್ ಮೌಊದ್(ಅ)ರ ಅತಿಥಿಗಳ ಸೇವೆ ಮಾಡಲು ಅಲ್ಲಾಹನು ಅವರೆಲ್ಲರಿಗೂ ಸೌಭಾಗ್ಯ ಕರುಣಿಸಿದ್ದಾನೆ ಎಂಬ ಕಾರಣಕ್ಕಾಗಿ ಅವರು ಸಹ ಅಲ್ಲಾಹನಿಗೆ ಕೃತಜ್ಞರಾಗಿರಬೇಕು ಎಂಬುದನ್ನೂ ನೆನಪಿನಲ್ಲಿಟ್ಟುಕೊಳ್ಳಬೇಕು. ಜನರ ಕೃತಜ್ಞತೆಯ ಮಾತುಗಳನ್ನು ಕೇಳಿ ನೀವು ಇನ್ನಷ್ಟು ಅಲ್ಲಾಹನ ಮುಂದೆ ತಲೆಬಾಗಬೇಕು, ಇನ್ನಷ್ಟು ವಿನಮ್ರರಾಗಬೇಕು. ಅಲ್ಲಾಹನು ನಿಮಗೆ ಇದರ ಸೌಭಾಗ್ಯವನ್ನು ದಯಪಾಲಿಸಲಿ.

ಕಾರ್ಯಕರ್ತರ ದೃಢಸಂಕಲ್ಪ ಮತ್ತು ಉತ್ಸಾಹದಿಂದ ಇಸ್ಲಾಮ್ ಮತ್ತು ಅಹ್ಮದಿಯತ್ತಿನ ಪ್ರಚಾರ ಸಹ ಆಗುತ್ತದೆ. ಅನೇಕ ಜನರು ತಮ್ಮ ಭಾವನೆಗಳು ಮತ್ತು ವೀಕ್ಷಣೆಗಳನ್ನು ಅಭಿಪ್ರಾಯಗಳ ರೂಪದಲ್ಲಿ ಬರೆದು ಕಳುಹಿಸುತ್ತಾರೆ. ಅವುಗಳಲ್ಲಿ ಕೆಲವನ್ನು ನಾನೀಗ ಪ್ರಸ್ತುತಪಡಿಸುತ್ತೇನೆ.

ಗ್ಯಾಂಬಿಯಾದ ಸಂಪರ್ಕ ಸಚಿವರು ಬರೆಯುತ್ತಾರೆ: 'ಜಲ್ಸ ಸಾಲಾನದ ಒಂದು ಆಳವಾದ ವಾಸ್ತವವನ್ನು ಕಂಡು ನಾನು ಬೆರಗಾದೆ. ಇದು ನಿಸ್ವಾರ್ಥ ಸೇವೆ, ಮೌನ ಮತ್ತು ದೃಢವಾದ ತ್ಯಾಗದ ತಳಹದಿಯ ಮೇಲೆ ನಿಂತಿರುವ ಒಂದು ಭವ್ಯವಾದ ಜಾಗತಿಕ ಸಮ್ಮೇಳನವಾಗಿದೆ.'

ನೈಜೀರಿಯಾದಿಂದ ಒಬ್ಬ ಅರಸ ಬಂದಿದ್ದರು, ಅವರ ಆಡಳಿತದ ಅಡಿಯಲ್ಲಿ ಸುಮಾರು ಅರ್ಧ ರಾಜ್ಯವಿದೆ. ಅವರು ಹೇಳುತ್ತಾರೆ: 'ನಾನು ಯು.ಕೆ.ಯ ಜಲ್ಸ ಸಾಲಾನಾಗೆ ಹೊರಟಾಗ, ನನ್ನ ಜೀವನದ ಮೇಲೆ ಇಷ್ಟೊಂದು ಆಳವಾದ ಪ್ರಭಾವ ಬೀರುವ ಇಂತಹ ಭವ್ಯವಾದ, ವ್ಯವಸ್ಥಿತ ಮತ್ತು ಆಧ್ಯಾತ್ಮಿಕ ಸಮ್ಮೇಳನದ ಭಾಗವಾಗಲಿದ್ದೇನೆ ಎಂದು ನಾನು ಊಹಿಸಿರಲಿಲ್ಲ.

ಇಲ್ಲಿಗೆ ತಲುಪಿದಾಗ ನಾನು ಅಸಾಧಾರಣ ಶಿಸ್ತು, ಸಹೋದರತ್ವ ಮತ್ತು ಮಾನವ ಸೇವೆಯ ಪ್ರಾಯೋಗಿಕ ಮಾದರಿಯನ್ನು ನೋಡಿದ್ದಲ್ಲದೆ, ಲೋಕದ ವಿವಿಧ ದೇಶಗಳು ಮತ್ತು ಸಮುದಾಯಗಳಿಗೆ ಸೇರಿದ ಜನರು ಪ್ರೀತಿ, ಗೌರವ ಮತ್ತು ಸಹೋದರತ್ವದ ಬಾಂಧವ್ಯದಲ್ಲಿ ಬಂಧಿತರಾಗಿರುವುದನ್ನು ಕಂಡೆ.'

ಅವರ ಪತ್ನಿ ಹೀಗೆ ಹೇಳಿದರು: 'ಮಹಿಳೆಯರಿಗಾಗಿ ಮಾಡಲಾದ ಅತುಲ್ಯವಾದ ಏರ್ಪಾಡುಗಳು, ಅವರ ಗೌರವ, ಸ್ವಾತಂತ್ರ್ಯ ಮತ್ತು ವಾತಾವರಣವನ್ನು ನೋಡಿ ನನಗೆ ಅತ್ಯಂತ ಆಶ್ಚರ್ಯವಾಯಿತು. ಸಾವಿರಾರು ಮಹಿಳೆಯರು ಅತ್ಯಂತ ಘನತೆಯಿಂದ ವ್ಯವಸ್ಥಿತವಾಗಿ ಜಲ್ಸಗೆ ಬಂದು ಹೋಗುವುದನ್ನು ನೋಡಿ ಇಸ್ಲಾಮಿನ ಬಗೆಗಿನ ನನ್ನ ಅನೇಕ ಕಲ್ಪನೆಗಳು ಬದಲಾಗಿವೆ.'

ಸೆನೆಗಲ್‌ನಿಂದ ಮಾಜಿ ಗವರ್ನರ್ ಸೇಂಟ್ ಲೂಯಿಸ್ ಅತಿಥಿಯಾಗಿ ಪಾಲ್ಗೊಂಡಿದ್ದರು. ಅವರು ಹೇಳುತ್ತಾರೆ: 'ನಾನು ಎಲ್ಲ ಭಾಷಣಗಳನ್ನು ಗಮನವಿಟ್ಟು ಕೇಳಿದೆ, ಅನುವಾದದ ವ್ಯವಸ್ಥೆ ಅತ್ಯುತ್ತಮವಾಗಿತ್ತು, ಇದರಿಂದಾಗಿ ನಮಗೆ ಎಲ್ಲ ಭಾಷಣಗಳು ಮತ್ತು ಸಂದೇಶಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಯಿತು. ಜಲ್ಸದ ಸಮಯದಲ್ಲಿ ಅತ್ಯಂತ ಎದ್ದು ಕಂಡದ್ದು ಪ್ರೀತಿ, ಶಾಂತಿ ಮತ್ತು ಸಹೋದರತ್ವದ ಸಂದೇಶವಾಗಿತ್ತು.'

ಲಕ್ಸೆಂಬರ್ಗ್‌ನಿಂದ ಒಬ್ಬ ವಕೀಲರು ಬಂದಿದ್ದರು. ಅವರು ಹೇಳುತ್ತಾರೆ: 'ಜಲ್ಸದ ಮೂರು ದಿನಗಳು ನನ್ನ ಜೀವನದ ಅತಿ ಮುಖ್ಯವಾದ ಮೂರು ದಿನಗಳಾಗಿವೆ. ನನ್ನ ಜೀವನದಲ್ಲಿ ಮೊದಲ ಬಾರಿಗೆ ಇಷ್ಟೊಂದು ದೊಡ್ಡ, ವ್ಯವಸ್ಥಿತ ಇಸ್ಲಾಮಿಕ ಸಮ್ಮೇಳನವನ್ನು ನಾನು ನೋಡುತ್ತಿದ್ದೇನೆ. ಜಾಗತಿಕ ಬೈಅತ್‌ನ ಆಧ್ಯಾತ್ಮಿಕ ದೃಶ್ಯವು ನನಗೆ ಮರೆಯಲಾಗದ್ದು ಆಗಿತ್ತು. ಖ಼ಲೀಫತುಲ್ ಮಸೀಹ್‌ರೊಂದಿಗೆ ನನ್ನ ಭೇಟಿಯಾಯಿತು. ಭೇಟಿಗೂ ಮುನ್ನ ನನಗೆ ಗಾಬರಿಯಿದ್ದರೂ, ಅವರನ್ನು ಭೇಟಿಯಾದ ತಕ್ಷಣವೇ ಗಾಬರಿ ದೂರವಾಯಿತು.'

ಒಬ್ಬ ನವ ಅಹ್ಮದಿ ಹೇಳುತ್ತಾರೆ: 'ಇಸ್ಲಾಮ್ ಸ್ವೀಕರಿಸುವ ಮೊದಲು ನಾನು ಕ್ರೈಸ್ತ ಧರ್ಮಕ್ಕೆ ಸೇರಿದ್ದೆ. ಈಮಾನಿನ ಸಂಬಂಧವು ಸಂಗೀತದೊಂದಿಗೆ ಆಗಿದೆ ಎಂದು ನಮಗೆ ಕಲಿಸಲಾಗುತ್ತಿತ್ತು; ಆದರೆ ನನಗೆ ಎಂದೂ ಈ ರೀತಿಯಲ್ಲಿ ಆಧ್ಯಾತ್ಮಿಕ ನೆಮ್ಮದಿ ಮತ್ತು ದೇವನ ಸಾಮೀಪ್ಯವನ್ನು ಅನುಭವಿಸಲು ಸಾಧ್ಯವಾಗಲಿಲ್ಲ. ಮುಸಲ್ಮಾನನಾದ ಮೇಲೂ ನಾನು ನಮಾಝ್ ಇತ್ಯಾದಿಗಳನ್ನು ನಿರ್ವಹಿಸುತ್ತಿದ್ದೆ, ಆದರೆ ಅದರಲ್ಲಿ ಭಾವುಕತೆ ಅನುಭವಿಸುತ್ತಿರಲಿಲ್ಲ. ಆದರೆ ಜಲ್ಸದಲ್ಲಿ ಪಾಲ್ಗೊಂಡಾಗ ನನ್ನ ಮೇಲೆ ಎಂತಹ ಆಧ್ಯಾತ್ಮಿಕ ಸ್ಥಿತಿ ಆವರಿಸಿತೆಂದರೆ ನನ್ನ ಕಣ್ಣುಗಳಿಂದ ಕಣ್ಣೀರು ಹರಿಯಿತು, ನಾನು ನಿರಂತರವಾಗಿ ದುಆ ಮಾಡುತ್ತಿದ್ದೆ. ಅಲ್ಲಾಹನೊಂದಿಗೆ ಮತ್ತು ಖಿಲಾಫತ್‌ನೊಂದಿಗೆ ನನಗೆ ಒಂದು ಆಧ್ಯಾತ್ಮಿಕ ಸಂಬಂಧ ಸ್ಥಾಪನೆಯಾಯಿತು.'

ಚೆಕ್ ರಿಪಬ್ಲಿಕ್‌ನಿಂದ ಇಬ್ಬರು ಪ್ರೊಫೆಸರ್‌ಗಳು ಬಂದಿದ್ದರು. ಅವರು ಹೇಳುತ್ತಾರೆ: 'ಮರಳಿ ಚೆಕ್ ರಿಪಬ್ಲಿಕ್‌ಗೆ ಹೋಗಿ, ನೀವು ಸ್ವತಃ ಹೋಗಿ ಈ ಭವ್ಯವಾದ ಸಭೆಯನ್ನು ವೀಕ್ಷಿಸಿ ಎಂದು ನಾವು ನಮ್ಮ ಸಹೋದ್ಯೋಗಿಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ಹೇಳುವೆವು. ಖಲೀಫತುಲ್ ಮಸೀಹ್‌ರ ಭಾಷಣದ ನಂತರ ನಮಗೆ ಇಸ್ಲಾಮ್ ಮತ್ತು ತಖ್ವದ ನೈಜ ಅರಿವು ಲಭಿಸಿತು.'

ಕಝ಼ಾಕಿಸ್ತಾನ್‌ನಿಂದ ಒಬ್ಬ ಮಹಿಳೆಯು ಜಲ್ಸದಲ್ಲಿ ಪಾಲ್ಗೊಂಡಿದ್ದರು, ಅವರು ಹೇಳುತ್ತಾರೆ: 'ಜಮಾಅತಿನ ಇಮಾಮ್ ಮತ್ತು ಇತರ ಭಾಷಣಕಾರರ ಭಾಷಣಗಳಲ್ಲಿ ಸತ್ಯವಿಶ್ವಾಸ, ಉನ್ನತ ನೈತಿಕತೆ, ಪರಸ್ಪರ ಸೌಹಾರ್ದತೆ, ಯುವಕರ ಸಮಸ್ಯೆಗಳು ಮತ್ತು ಸಮಾಜದ ತರಬೇತಿಯಂತಹ ಪ್ರಮುಖ ವಿಷಯಗಳ ಮೇಲೆ ಬೆಳಕು ಚೆಲ್ಲಲಾಯಿತು.'

ಅಮೆರಿಕದಿಂದ ಒಬ್ಬ ಕಾನೂನು ಪ್ರಾಧ್ಯಾಪಕರು ಹೀಗೆ ಹೇಳಿದರು: 'ನನಗೆ ಪ್ರಪಂಚದಾದ್ಯಂತ ಸಭೆಗಳು ಮತ್ತು ಸಮ್ಮೇಳನಗಳಲ್ಲಿ ಪಾಲ್ಗೊಳ್ಳುವ ಅವಕಾಶ ಸಿಕ್ಕಿದೆ, ಆದರೆ ಯು.ಕೆ. ಜಲ್ಸ ಸಾಲಾನದ ಅನುಭವವು ಅವೆಲ್ಲಕ್ಕಿಂತಲೂ ವಿಶಿಷ್ಟವಾಗಿದೆ. ನೂರಕ್ಕೂ ಹೆಚ್ಚು ದೇಶಗಳಿಂದ ಬಂದಿದ್ದ ಜನರು, ವಿವಿಧ ಧರ್ಮಗಳು, ಸಮುದಾಯಗಳು ಮತ್ತು ಜೀವನದ ವಿವಿಧ ಕ್ಷೇತ್ರಗಳಿಗೆ ಸೇರಿದ ಜನರನ್ನು ಭೇಟಿಯಾಗುವ ಅವಕಾಶ ಸಿಕ್ಕಿತು. ವಿವಿಧ ಪ್ರದರ್ಶನಗಳು ನನ್ನ ಮೇಲೆ ಬಹಳ ಪ್ರಭಾವ ಬೀರಿದವು. ಉನ್ನತ ಶಿಕ್ಷಣ ಪಡೆದ ವೈದ್ಯರು, ಇಂಜಿನಿಯರ್‌ಗಳು, ವಕೀಲರು ಮತ್ತು ಇತರ ವಿಜ್ಞಾನ–ಜ್ಞಾನಗಳ ಪರಿಣಿತರು ಅತ್ಯಂತ ವಿನಮ್ರತೆಯಿಂದ ಸೇವೆ ಸಲ್ಲಿಸುತ್ತಿರುವುದು ನನ್ನ ಮೇಲೆ ಅಪಾರ ಪ್ರಭಾವ ಬೀರಿತು.'

ಬ್ರೆಜಿಲ್‌ನಿಂದ ಒಬ್ಬ ಟೆಲಿವಿಷನ್ ವರದಿಗಾರರು ಹೇಳುತ್ತಾರೆ: 'ಈ ಕಾರ್ಯಕ್ರಮದ ಭವ್ಯವಾದ ಪ್ರಮಾಣ ಮತ್ತು ವಿಸ್ತಾರವನ್ನು ನೋಡಿ ನಾನು ಆಶ್ಚರ್ಯಚಕಿತನಾಗಿದ್ದೇನೆ, ವಿಶೇಷವಾಗಿ ಲಂಗರ್‌ಖಾನೆಯ ಗಾತ್ರ ಮತ್ತು ಊಟ ತಯಾರಿಸುವ ಎಲ್ಲ ಜಾಗಗಳು ಅತ್ಯಂತ ವಿಶಾಲ, ಆಧುನಿಕ, ವ್ಯವಸ್ಥಿತ ಮತ್ತು ಅತ್ಯಂತ ಸ್ವಚ್ಛ ಸುಂದರವಾಗಿದ್ದವು.'

ಫಿಲಿಪ್ಪೈನ್ಸ್‌ನಿಂದ ಒಬ್ಬ ಪ್ರೊಫೆಸರ್ ತಮ್ಮ ಪತ್ನಿಯೊಂದಿಗೆ ಬಂದಿದ್ದರು, ಅವರ ಪತ್ನಿ ಸಹ ಪ್ರೊಫೆಸರ್ ಆಗಿದ್ದಾರೆ. ಅವರು ಹೇಳುತ್ತಾರೆ: 'ಸ್ವಯಂಸೇವಕರು ತಮ್ಮ ಶ್ರಮದಿಂದ ಈ ತಾತ್ಕಾಲಿಕ ನಗರವನ್ನು ನಿರ್ಮಿಸಿರುವುದನ್ನು ನೋಡಿ ಆಶ್ಚರ್ಯವಾಯಿತು.'

ಎಲ್ ಸಾಲ್ವಡಾರ್‌ನಿಂದ ಬಂದಿದ್ದ ಒಬ್ಬ ಅತಿಥಿ, ಸೆಂಟ್ರಲ್ ಅಮೆರಿಕನ್ ಸಂಸತ್ತಿನಲ್ಲಿ ಎಲ್ ಸಾಲ್ವಡಾರ್‌ನ ಪ್ರತಿನಿಧಿಯಾಗಿದ್ದಾರೆ, ಅವರು ಹೇಳುತ್ತಾರೆ: 'ಖಲೀಫರನ್ನು ಭೇಟಿಯಾದ ನಂತರ, ಖಲೀಫರಿಗೆ ತಮ್ಮ ಜಮಾಅತಿನ ಬಗ್ಗೆ ಬಹಳಷ್ಟು ಮಾಹಿತಿ ಇರುತ್ತದೆ ಎಂಬುದು ನನಗೆ ಮನವರಿಕೆಯಾಗಿದೆ.'

ಬೆಲೀಝ್‌ನಿಂದ ಒಬ್ಬ ನವ ಅಹ್ಮದಿ ಮಹಿಳೆ ಹೇಳುತ್ತಾರೆ: 'ನಾವು ಬಹಳ ಚಿಕ್ಕ ದೇಶಕ್ಕೆ ಸೇರಿದವರಾಗಿದ್ದೇವೆ. ನಾನು ವಾಸಿಸುವ ನಗರದ ಜನಸಂಖ್ಯೆ ಐವತ್ತು ಸಾವಿರ. ಎಲ್ಲಾದರೂ ನೂರು ಜನ ಸೇರಿದರೂ ಜಗಳಗಳು ಪ್ರಾರಂಭವಾಗುತ್ತವೆ; ಆದರೆ ಜಲ್ಸದ ಏರ್ಪಾಡಿನಲ್ಲಿ ಅಸಾಧಾರಣವಾದ ಶಾಂತಿ ಇತ್ತು.'

ಬಲ್ಗೇರಿಯಾದಿಂದ ಬಂದಿದ್ದ ಓರ್ವ ಪ್ರಭಾವಿ ವ್ಯಕ್ತಿ ಹೀಗೆ ಹೇಳಿದರು: 'ಜಲ್ಸದಲ್ಲಿ ನಡೆದ ಭಾಷಣಗಳು ಬಹಳಷ್ಟು ಮಾಹಿತಿಯುಕ್ತ, ಜ್ಞಾನಪೂರ್ಣ ಮತ್ತು ಉನ್ನತ ಮಟ್ಟದ್ದಾಗಿದ್ದವು. ಭಾಷಣಕಾರರು ಧಾರ್ಮಿಕ ಮತ್ತು ವೈಜ್ಞಾನಿಕ ವಿಷಯಗಳನ್ನು ಅತ್ಯಂತ ಸುಂದರವಾದ ರೀತಿಯಲ್ಲಿ ಮಂಡಿಸಿದರು, ಇದರಿಂದಾಗಿ ಹಾಜರಿದ್ದವರ ಜ್ಞಾನ ಮತ್ತು ಅರಿವು ಹೆಚ್ಚಾಯಿತು.'

ಸೆನೆಗಲ್‌ನಿಂದ ತಮ್ಮ ಪ್ರದೇಶದ ಧಾರ್ಮಿಕ ನಾಯಕರಾಗಿದ್ದ ವ್ಯಕ್ತಿಯೊಬ್ಬರು ಬಂದಿದ್ದರು. ಅವರು ಹೇಳುತ್ತಾರೆ: 'ಜಮಾಅತಿನ ಇಮಾಮ್‌ರೊಂದಿಗೆ ನನ್ನ ಭೇಟಿಯಾಯಿತು, ಇದರಿಂದ ನನಗೆ ಜಮಾಅತನ್ನು ಅರ್ಥಮಾಡಿಕೊಳ್ಳಲು ಬಹಳಷ್ಟು ಅವಕಾಶ ಸಿಕ್ಕಿತು. ಅದಕ್ಕಾಗಿ ನಾನು ನಿಮಗೆ ಹೃದಯದ ಅಂತರಾಳದಿಂದ ಕೃತಜ್ಞತೆಯನ್ನು ಅರ್ಪಿಸುತ್ತೇನೆ.'

ಸೆನೆಗಲ್‌ನಿಂದ ಒಬ್ಬ ಸಂಸತ್ ಸದಸ್ಯರು ಪಾಲ್ಗೊಂಡಿದ್ದರು. ಅವರು ಹೇಳುತ್ತಾರೆ: 'ನಾಮಮಾತ್ರವಾದ ಇಸ್ಲಾಮಿಗಿಂತ ಹೆಚ್ಚಾಗಿ ಇಲ್ಲಿ ನಾನು ನೈಜ ಸೇವೆಯ ಇಸ್ಲಾಮನ್ನು ನೋಡಿದೆ. ನೀಡುವಂತಹ ಕೈಗಳನ್ನು ನೋಡಿದೆ, ಕ್ಷಮಿಸುವಂತಹ ಹೃದಯಗಳನ್ನು ನೋಡಿದೆ, ಇತರರಿಗಾಗಿ ಯಾವಾಗಲೂ ತೆರೆದಿರುವ ಬಾಗಿಲುಗಳನ್ನು ನೋಡಿದೆ.'

ಕೊಸೊವೊದಿಂದ ಒಬ್ಬ ಅತ್ಯಂತ ಗೌರವಾನ್ವಿತ ಸಂಶೋಧಕ, ಶಿಕ್ಷಣ ತಜ್ಞ ಪ್ರೊಫೆಸರ್ ಜಲ್ಸದಲ್ಲಿ ಪಾಲ್ಗೊಂಡಿದ್ದರು. ಅವರು ಹೇಳುತ್ತಾರೆ: 'ಜಮಾಅತಿನ ಇಮಾಮರ ಭಾಷಣಗಳನ್ನು ಕೇಳುವ ಅವಕಾಶ ಸಿಕ್ಕಿತು, ಅವರೊಂದಿಗೆ ಭೇಟಿಯೂ ಆಯಿತು. ಶಾಂತಿ, ಧರ್ಮಗಳ ನಡುವಿನ ಸೌಹಾರ್ದತೆ, ಮಾನವ ಸಮಾನತೆ, ಪರಸ್ಪರ ಗೌರವ ಮತ್ತು ಸಮಾಜದ ಪ್ರತಿಯೊಬ್ಬ ವ್ಯಕ್ತಿಯನ್ನೂ ಒಟ್ಟಿಗೆ ಕೊಂಡೊಯ್ಯಲು ನಿರಂತರ ಮತ್ತು ಅಸಾಧಾರಣವಾಗಿ ಒತ್ತು ನೀಡುವುದು; ಇವುಗಳು ನನ್ನ ಮೇಲೆ ಅತಿ ಹೆಚ್ಚು ಪ್ರಭಾವ ಬೀರಿದ ವಿಷಯಗಳಾಗಿವೆ.'

ಸ್ಪೇನಿನ ಪೆಡ್ರೊ ಅಬಾದ್‌ನ ಮೇಯರ್ ಬಂದಿದ್ದರು. ಅವರು ಹೇಳುತ್ತಾರೆ: 'ಇದು ಕೇವಲ ನಂಬಿಕೆಯ ಆಚರಣೆಯಲ್ಲ, ಬದಲಾಗಿ ಇದು ವಿವಿಧ ದೇಶಗಳು, ಸಂಸ್ಕೃತಿಗಳು ಮತ್ತು ಸಿದ್ಧಾಂತಗಳಿಗೆ ಸೇರಿದ ಜನರ ನಡುವಿನ ಸಹಬಾಳ್ವೆಯ ಒಂದು ಅಸಾಧಾರಣ ಪ್ರದರ್ಶನವಾಗಿದೆ ಎಂಬುದನ್ನು ನೋಡುವ ಅವಕಾಶವನ್ನು ಜಲ್ಸ ಸಾಲಾನವು ನಮಗೆ ನೀಡಿದೆ.'

(ಅದೇ ರೀತಿ, ಜಲ್ಸದ ಅಸಾಧಾರಣ ವ್ಯವಸ್ಥೆ ಮತ್ತು ಆಧ್ಯಾತ್ಮಿಕ ವಾತಾವರಣವನ್ನು ಶ್ಲಾಘಿಸಿದ ಇತರ ಕೆಲವು ಗೌರವಾನ್ವಿತ ಅತಿಥಿಗಳ ವೀಕ್ಷಣೆಗಳು ಮತ್ತು ಅಭಿಪ್ರಾಯಗಳನ್ನು ಸಹ ಹುಝೂ಼ರ್ ಪ್ರಸ್ತುತಪಡಿಸಿದರು.)

ಗ್ರೀಸ್‌ನಿಂದ ಅತಿಥಿಯಾಗಿ ಆಗಮಿಸಿದ ಮಹಿಳೆಯೊಬ್ಬಳು ಜಲ್ಸದ ಎಲ್ಲ ವ್ಯವಸ್ಥೆಗಳನ್ನು ಹೊಗಳುತ್ತಾ, ಒಂದು ವಿಷಯವನ್ನು ಪ್ರಸ್ತಾಪಿಸಿ ಹೀಗೆ ಹೇಳಿದರು: 'ಕೆಲವು ಮಹಿಳೆಯರು ಇಸ್ಲಾಮಿಕ ಡ್ರೆಸ್ ಕೋಡನ್ನು (ಪರ್ದಾ) ಸರಿಯಾಗಿ ಪಾಲಿಸುತ್ತಿರಲಿಲ್ಲ ಮತ್ತು ಕೆಲವು ಪುರುಷರು ಕೂಡ ದೃಷ್ಟಿಯನ್ನು ತಗ್ಗಿಸುವಲ್ಲಿ ದೌರ್ಬಲ್ಯವನ್ನು ತೋರಿಸುತ್ತಿದ್ದರು ಎಂಬುದು ನನಗೆ ಇಷ್ಟವಾಗಲಿಲ್ಲ.'

(ಹುಝೂ಼ರ್ ಹೇಳಿದರು:) 'ನಾನು ಈ ಬಗ್ಗೆ ವಿಶೇಷವಾಗಿ ಉಪದೇಶ ನೀಡಿದ್ದೆ. ನಕಾರಾತ್ಮಕ ಅಭಿಪ್ರಾಯಗಳನ್ನು ಕೂಡ ನಮ್ಮ ಸುಧಾರಣೆಗಾಗಿ ನಾವು ಕೇಳಬೇಕು. ಆದ್ದರಿಂದ, ಅನ್ಯರು ನಮ್ಮನ್ನು ಬಹಳ ಸೂಕ್ಷ್ಮ ದೃಷ್ಟಿಯಿಂದ ನೋಡುತ್ತಾರೆ ಎಂಬುದನ್ನು ಎಚ್ಚರಿಕೆ ವಹಿಸದವರು ನೆನಪಿಟ್ಟುಕೊಳ್ಳಬೇಕು. ಇಸ್ಲಾಮಿನ ನೈಜ ಚಿತ್ರಣಕ್ಕೆ ಕಳಂಕ ತರುವಂತಹ ಯಾವುದೇ ಅವಕಾಶವನ್ನು ನಾವು ಅವರಿಗೆ ನೀಡಬಾರದು. 'ಅನ್ಯರಿಗೆ ನಮ್ಮ ವಿರುದ್ಧ ಬೊಟ್ಟು ಮಾಡುವ ಅವಕಾಶವನ್ನು ನೀಡಬಾರದು.' ಎಂಬ ಹಝ್ರ಼ತ್ ಮಸೀಹ್ ಮೌಊದ್(ಅ)ರ ಒಂದು ಉಲ್ಲೇಖವನ್ನು ಜಲ್ಸದ ಭಾಷಣಗಳ ಸಮಯದಲ್ಲಿ ನಾನು ಓದಿ ಹೇಳಿದ್ದೆ.

(ಹುಝೂ಼ರ್ ಪತ್ರಿಕಾ ಮತ್ತು ಮಾಧ್ಯಮಗಳಲ್ಲಿ ಜಲ್ಸದ ಉತ್ತಮ ಪ್ರಸಾರದ ಬಗ್ಗೆಯೂ ಪ್ರಸ್ತಾಪಿಸಿದರು. ಮುದ್ರಣ ಮಾಧ್ಯಮ, ರೇಡಿಯೋ, ಟಿವಿ ಮತ್ತು ಸಾಮಾಜಿಕ ಮಾಧ್ಯಮಗಳ ಮೂಲಕ ಜಲ್ಸ ಸಾಲಾನವನ್ನು ವ್ಯಾಪಕವಾಗಿ ಪ್ರಸಾರ ಮಾಡಲಾಯಿತು. ವಿವಿಧ ಪತ್ರಿಕೆಗಳು ಹಾಗೂ ಟಿವಿ ಚಾನೆಲ್‌ಗಳು ಸಹ ಜಲ್ಸದ ವರದಿಯನ್ನು ಮಾಡಿದವು.)

(ಖುತ್ಬದ ಕೊನೆಯಲ್ಲಿ ಹುಝೂರ್ ಹೇಳಿದರು:) ಅಲ್ಲಾಹನು ಈ ಜಲ್ಸದ ಉತ್ತಮ ಪ್ರಭಾವಗಳನ್ನು ಜಮಾಅತಿನ ಸದಸ್ಯರ ಮೇಲೆ ನೆಲೆನಿಲ್ಲಿಸಲಿ, ಜನರ ಮಾರ್ಗದರ್ಶನವನ್ನು ಮಾಡಲಿ ಹಾಗೂ ಅವರನ್ನು ನೈಜ ಇಸ್ಲಾಮ್ ಮತ್ತು ಅಹ್ಮದಿಯತಿನ ಕಡೆಗೆ ಸೆಳೆಯಲಿ. ಆಮೀನ್.

————————————*****————————————

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ، وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِی الْقُرْبٰی
وَيَنْهٰی عَنِ الْفَحْشَآءِ وَالْمُنْكَرِ وَالْبَغْیِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis*** *(atba)*

At, ***'Masjid Mubarak'***, *Islamabad, Tilford,* U.K. On 31-07-2026

**Summarized by** *Majlis Ansarullah Bharat*

***Kannada Translation:*** Moulavi Inamullah for Kannada Desk, Qadian

***Reviewed by:*** M.P Ibrahim | ***Layout:*** Basheer K.P. Manjeshwar

***Published By:*** Kannada Isha'at Team for Nazarath Nashr-O-Isha'ath, Qadian



***Email*:** *khutuba.kannada@gmail.com*



**You can find all the Sermons archived at**: www.alislam.org/friday-sermon